# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ

EDITOR: BASAPUR BASAVARAJA

ಕನ್ನಡ ದಿನಪತ್ರಿಕೆ

KANNADA DAILY



Spend LESS and get MORE publicity

BENEFITS OF ADVERTISING in Local Leading HAMPI TIMES Newspaper

1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options

CALL US : 9448633038

Email us Your Advertisement Content to : hampitimes@gmail.com



ಸಂಪುಟ:01 Volume:01 • ಸಂಚಿಕೆ:198 Issue:198 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 31.12.2023 31.12.2023 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2




ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಮತ್ತೊಮ್ಮೆ ಕರೋನಾ ಆರೋಗ್ಯ ಜೋಪಾನ



ಮರೆಯಬೇಕೆಂದುಕೊಂಡಿದ್ದ ಮಹಾಮಾರಿ ಕರೋನಾ ಮತ್ತೊಮ್ಮೆ ವಕ್ಕರಿಸುತ್ತಿದೆ. ಭೀಕರವಾಗಿ ಆವರಿಸದಿದ್ದರೂ ನಿಧಾನಕ್ಕೆ ಮತ್ತೊಮ್ಮೆ ಹೆಜ್ಜೆಗಳನ್ನು ಹಾಕುತ್ತಿದೆ. ನಾವು ಈಗಲೇ ಎಚ್ಚರಿಕೆ ವಹಿಸದಿದ್ದರೆ ಅಪಾಯದ ಗಂಟೆ ಕಟ್ಟಿಟ್ಟ ಬುತ್ತಿ. ದೇಶದಲ್ಲಿ ಹೆಚ್ಚಾಗಿ ಹರಡುತ್ತಿರುವ ಕರೋನಾ ಪ್ರಕರಣಗಳ ಸಂಖ್ಯೆಯಲ್ಲಿ ಕರ್ನಾಟಕ ಪ್ರಸಕ್ತ ಎರಡನೇ ಸ್ಥಾನದಲ್ಲಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಈ ಹಿಂದೆ ಕರೋನಾ ದೇಶಾದ್ಯಂತ ಆವರಿಸಿದ್ದಾಗ ಏನೆಲ್ಲ ಅನಾಹುತಳನ್ನು ಮಾಡಿದೆ ಎಂಬುದು ನಮ್ಮೆಲ್ಲರಿಗೆ ಗೊತ್ತಿದೆ. ಎರಡು ಹಂತದ ಕರೋನ ಏನೋ ಬಂದು ಹೋಗಿದೆ. ಆದರೆ, ಅದು ತಂದಿಟ್ಟ ಸಂಕಷ್ಟಗಳು ಅಷ್ಟಿಷ್ಟಲ್ಲ. ಈಗಲೂ ದೇಶ, ಸರ್ಕಾರ ಮತ್ತು ಜನರು ಇದನ್ನು ಅನುಭವಿಸುತ್ತಿದ್ದಾರೆ. ಆ ಸಮಯದಲ್ಲಿ ಎಷ್ಟೋ ಜನ ತಮ್ಮ ತಂದೆ, ತಾಯಿ, ಅಣ್ಣ–ತಮ್ಮ, ಅಕ್ಕ–ತಂಗಿ, ಹೆಂಡತಿ, ಬಂಧು–ಬಳಗ, ಸ್ನೇಹಿತರನ್ನು ಕಳೆದುಕೊಂಡರು. ಆ ದುಃಖವೇ ಇನ್ನೂ ಮಾಸಿಲ್ಲ. ಹಲವು ಕಂಪನಿಗಳು ಮುಚ್ಚಿಯೇ ಹೋದವು. ಅಲ್ಲಿಂದ ನಿರುದ್ಯೋಗಿಗಳಾಗಿ ಹೊರಬಂದವರು ಇನ್ನೂ ನೆಲೆ ಕಂಡುಕೊಂಡಿಲ್ಲ. ನಂತರದ ದಿನಗಳಲ್ಲಿ ಎಲ್ಲ ಕಂಪನಿಗಳಲ್ಲಿ ಹುದ್ದೆಗಳ ಕಡಿತ ನಡೆಯಿತು. ಹೀಗಾಗಿ ಇಂದಿಗೂ ಲಕ್ಷಾಂತರ ಜನರು ನೌಕರಿ ಇಲ್ಲದೆ ಪರದಾಡುತ್ತಿದ್ದಾರೆ. ದೇಶದ ಆರ್ಥಿಕ ವ್ಯವಸ್ಥೆಯನ್ನೂ ಕರೋನಾ ಅದು ಬುಡಮೇಲು ಮಾಡಿಬಿಟ್ಟಿತ್ತು. ಇಲ್ಲಿ ಪ್ರಸ್ತಾಪವಾಗಿದ್ದು ಒಂದೆರಡು ಅಂಶಗಳಷ್ಟೇ. ಇಂಥ ಲಕ್ಷಾಂತರ ಸಮಸ್ಯೆಗಳನ್ನು ಕರೋನಾ ತಂದೊಟ್ಟಿತ್ತು. ಈಗ ಮತ್ತೊಮ್ಮೆ ಕರೋನಾ ಕಳ್ಳಹೆಜ್ಜೆಯನ್ನಿಟ್ಟು ಬರುತ್ತಿದೆ. ಈ ಸಮಯದಲ್ಲಿ ನಾವು ಮತ್ತು ನಮ್ಮವರು ಸುರಕ್ಷಿತವಾಗಿರಲು ಏನು ಬೇಕೋ ಅದನ್ನು ತಪ್ಪದೆ ಮಾಡಲೇಬೇಕಿದೆ. ಹಾಗಂತ ಗಾಭರಿ ಬೀಳಬೇಡಿ. ಸರಳ ಸೂತ್ರಗಳನ್ನು ಅಳವಡಿಸಿಕೊಳ್ಳುವ ಮೂಲಕ ಕರೋನ ಮಹಾಮಾರಿಯನ್ನು ಹಿಮ್ಮೆಟ್ಟಿಸಬೇಕಿದೆ. ನಿಮಗೇ ಗೊತ್ತಿರುವಂತೆ ಹೆಚ್ಚು ಜನ ಸೇರುವ ಕಡೆ ಮಾಸ್ಕ್ ಧರಿಸುವುದನ್ನು ಮರೆಯಬೇಡಿ. ಮನೆಯಲ್ಲಿ ಹಿರಿಯರು ಮತ್ತು ಚಿಣ್ಣರ ಆರೋಗ್ಯದತ್ತ ಗಮನ ಹರಿಸಿ. ದೇಹದಲ್ಲಿ ಸ್ವಲ್ಪ ವ್ಯತ್ಯಯ ಕಂಡುಬಂದರೂ ನಿಮ್ಮ ಕುಟುಂಬದ ವೈದ್ಯರ ಬಳಿ ಹೋಗಿ. ನೆಗಡಿ, ಕೆಮ್ಮು, ಚಳಿ ಮತ್ತು ಜ್ವರವೆಂದು ಮನೆಯಲ್ಲೇ ಸ್ವ ಚಿಕಿತ್ಸೆಯನ್ನು ಮಾತ್ರ ಈ ಸಮಯದಲ್ಲಿ ಮಾಡಿಕೊಳ್ಳದಿರಿ. ಅಮೂಲ್ಯವಾದ ಜೀವವನ್ನು ನಾವು ಕಾಪಾಡಿಕೊಳ್ಳಬೇಕು. ನಮ್ಮನ್ನೇ ನಂಬಿ ನಮ್ಮ ಕುಟುಂಬ ಉಸಿರಾಡುತ್ತಿದೆ. ಇದನ್ನು ಮನದಟ್ಟು ಮಾಡಿಕೊಳ್ಳಬೇಕಿದೆ. ಮೊದಲ ಎರಡು ಹಂತದ ಕರೋನ ಪರಿಣಾಮಗಳನ್ನು ನೆನಪಿಸಿಕೊಳ್ಳಿ. ಕೆಲಸ ಕಳೆದುಕೊಂಡವರು, ತಮ್ಮವರನ್ನು ಕಳೆದುಕೊಂಡವರು ಇನ್ನೂ ಚೇತರಿಸಿಕೊಂಡಿಲ್ಲ. ಕೇವಲ ಸಾಮಾನ್ಯ ಜ್ವರವಿದು ಎಂದು ತಾತ್ಸಾರ ಮಾಡಬೇಡಿ. ಸರ್ಕಾರ ಸೂಚಿಸುವ ಮಾರ್ಗಸೂಚಿಗಳನ್ನು ತಪ್ಪದೆ ಪಾಲಿಸಿ, ಇದರಲ್ಲಿ ನಿರ್ಲಕ್ಷ್ಯ ಬೇಡ. ನಮ್ಮ ಉದಾಸೀನತೆ ಮತ್ತೊಬ್ಬರಿಗೆ ಭಾರ ಆಗಬಾರದು. ಸ್ವಲ್ಪ ಅನುಮಾನ ಬಂದರೂ ಟೆಸ್ಟ್ ಮಾಡಿಸಿ. ಒಂದು ವೇಳೆ ಕರೋನಾ ಬಂದಿದ್ದೇ ಆದರೆ ಆತಂಕಕ್ಕೆ ಒಳಗಾಗದಿರಿ. ವೈದ್ಯಕೀಯ ಕ್ಷೇತ್ರ ಬಹಳ ಮುಂದುವರಿದಿದೆ. ಗುಣಮಟ್ಟದ ಔಷಧಗಳು ಬಂದಿವೆ. ಏನೂ ಆಗೊದಿಲ್ಲ. ಆದರೆ, ಮಾನಸಿಕವಾಗಿ ನೀವು–ನಾವೆಲ್ಲ ಗಟ್ಟಿಯಾಗಿರಬೇಕಷ್ಟೇ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ–ಮೇಲ್:hampitimes@gmail.com

M: 9448633038

# ಏನಾದರಾಗು ಮೊದಲು ಮಗುವಾಗು

## ಮಾನವನಾಗುವ ಮೊದಲ ಹೆಜ್ಜೆಯೇ ಮಗುವಾಗುವುದು

**"ಏನಾದರಾಗು ಮೊದಲು ಮಾನವನಾಗು"** ಎನ್ನುವ ಮಾತು ಎಷ್ಟು ಸತ್ಯವೂ, ನೀವೂಬ್ಬ "ಉತ್ತಮ ಪಾಲಕರಾಗಲು ಮೊದಲು ಮಾಡಬೇಕಾದ ಪ್ರಪ್ರಥಮ ಪ್ರಯತ್ನವೇ ಮಗುವಾಗಲು ಅಣಿಯಾಗುವುದು. ಮಗುವಿನ ಮನಸ್ಥಿತಿಯನ್ನು ಹೊಂದಲು, ಮಗುವಿನಂತೆ ವಿಚಾರಮಾಡಲು, ಮಕ್ಕಳಂತೆ ವಿಶಾಲವಾಗಲು ಕೊನೆಗೆ ಮಕ್ಕಳೇ ಆಗಿಹೊಗಬೇಕು.

ಆಗ ಮಾತ್ರ ನಿಮ್ಮ ಮಕ್ಕಳನ್ನು ನೀವು ಅರ್ಥಮಾಡಿಕೊಳ್ಳಲು, ಅವರ ಬೇಕು ಬೇಡ ಗಳನ್ನು ತಿಳಿದುಕೊಳ್ಳಲು, ಅವರ ಇಷ್ಟ ಕಷ್ಟಗಳನ್ನು, ಮಕ್ಕಳ ಮನಸ್ಥಿತಿಯನ್ನು, ಅವರ ಯೋಚನಾ ಲಹರೆಯನ್ನ ತಕ್ಕ ಮಟ್ಟಿಗೆ ಅರ್ಥೈಸಲು ಸಾಧ್ಯವಾಗುತ್ತದೆ, ಆಗ ಮಾತ್ರ ಮಕ್ಕಳ ಸಾಮ್ರಾಜ್ಯದಲ್ಲಿ ಪಾಲಕರಾದ ನಮಗೊಂದು ರಹದಾರಿ ಸಿಕ್ಕಾಂತಾಗುತ್ತದೆ.

ಎಲ್ಲಿಯವರೆಗೂ ನಾವು ನಮ್ಮ ದೃಷ್ಟಿಕೋನದಿಂದ ನಮ್ಮ ಮಕ್ಕಳು ಹಾಗು ಅವರ ಬೇಕು ಬೇಡಗಳನ್ನು ನೋಡುತ್ತೇವೆ, ಅಲ್ಲಿಯವರಗೋ ಅವರು ನಮಗೆ ನಿಲುಕುವುದಿಲ್ಲ ಮತ್ತು ಅವರು ನಮ್ಮ ದೃಷ್ಟಿಕೊನದಲ್ಲಿ ಕೇವಲ ಅಸಾಯಕ ಮಕ್ಕಳಾಗಿಯೇ ಇರುತ್ತಾರೆಯೆ ಹೊರತು, ಅವರಲ್ಲಿರುವ ಅಗಾಧವಾದ ಕುತೂಹಲ, ಅದಮ್ಯ ವಿಸ್ವಾಸ, ನಿರೀಕ್ಷೆಗೂ ಮೀರಿದ ಕಲ್ಪನೆ, ದಣಿವರೆಯದ ಮನಸ್ಥಿತಿ, ಸದಾ ಚಟುವಟಿಕೆಯಲ್ಲಿ ತೋಡಗಿಸಿಕೊಳ್ಳುವ ಪರಿ, ಪ್ರತಿಯೊಂದನ್ನು ಆಸಕ್ತಿಯುತವಾಗಿ, ಪರೀಕ್ಷಾರ್ಥವಾಗಿ, ನಿಷ್ಕಲ್ಮಶ ಮನೋಭೂಮಿಕೆಯ ತಳಹದಿಯಲ್ಲಿ ನೋಡುವ ಗುಣ ಹಾಗೆಯೇ ಏನು ಇಲ್ಲದೆ ಇರುವುದು, ಏನೂ ಅಲ್ಲದನ್ನು ಇನ್ನಿಲ್ಲದಂತೆ ಅಂದುಕೊಳ್ಳುವುದು! ಇರುವುದನ್ನೆ ಒಪ್ಪಿಕೊಳ್ಳುವುದು, ಇರದುದನ್ನೂ ಕಲ್ಪಿಸಿಕೊಳ್ಳುವುದು, ತನ್ನದಲ್ಲದ್ದನ್ನು ತೆಜಿಸುವುದು, ತನ್ನವರನ್ನು ಬಿಟ್ಟುಕೊಡದಿರುವುದು ಇಂತಹ ಹತ್ತು ಹಲವಾರು ಮೂಲ ಮಾನವಿಕ ಮೌಲ್ಯಗಳ ಪರಿಚಯವೇ ನಮಗಾಗುವುದಿಲ್ಲ.

ಇದೆಲ್ಲದರ ಅನುಭೂತಿ ನಮಗಾಗಬೇಕಾದರೆ, ನಾವು ಮಗುವಾಗಬೇಕು ಮಗುವಾದರೆ ಮಾತ್ರ ಪಾಲಕನಾಗಲು ಸಾಧ್ಯ, ಹಾಗಾಗಿ ಮಾನವನಾಗುವ ಮೊದಲ ಹೆಜ್ಜೆಯೇ ಮಗುವಾಗುವುದು "ಏನಾದರಾಗು ಮೊದಲ ಮಾನವನಾಗು" ಎಷ್ಟು ಸತ್ಯವೂ ಅಷ್ಟೇ ಸತ್ಯವಾದ ಮಾತು ಮೊದಲು ಮಗುವಾಗುವುದು, ಮಗುವಿನ ಮನಸ್ಥಿತಿಯನ್ನು ಹೊಂದುವುದು. ಆಗ ಮಾತ್ರ ಮಕ್ಕಳನ್ನು ಸರಿಯಾದ ಕ್ರಮದಲ್ಲಿ, ಸಹಜ ಮತ್ತು ಮನೋವೈಜ್ಞಾನಿಕ ದೃಷ್ಟಿಕೋನದಲ್ಲಿ ಅರಿಯಲು ಸಾಧ್ಯವಾಗುತ್ತದೆ.

ಸರಿ ಹಾಗಾದರೆ ಈ ಮಕ್ಕಳ ಮಾನಸಿಕ ಸ್ಥಿತಿಯನ್ನು, ದೈಹಿಕ ಅಗತ್ತ್ಯತೆಗಳನ್ನು ತಿಳಿಯುವುದು ಹೇಗೆ? ಮಕ್ಕಳ ಮನಸ್ಥಿತಿಯನ್ನು ಅರಿಯಲು ಯಾರನ್ನು ಕೇಳಬೇಕು, ಯಾವ ಪುಸ್ತಕ ಓದಬೇಕು? ಇದಕ್ಕೇನಾದರು ಸಿದ್ದ ಸೋತ್ರಗಳಿವೆಯೇ? ಇರುವುದಾದರೆ ಎಲ್ಲಿ? ಎಂಬೆಲ್ಲ ಪ್ರಶ್ನೆಗಳು ನಿಮ್ಮನ್ನು ಕಾಡುತ್ತಿದ್ದರೆ, ಒಂದು ಹಂತಕ್ಕೆ ನೀವು ಉತ್ತಮ ಪಾಲಕರೇ! ನೋ ಡೌಟ್. ಆದರೆ ನಾವು ನೋಡುತ್ತಿರುವ ಬಹುತೇಕ ಪಾಲಕ ವರ್ಗದಲ್ಲಿ ಒಂದು ಅಂಶವನ್ನು ಗಮನಿಸುತ್ತಿದ್ದೇವೆ ಅದೇನಂದರೆ "ಅವು ಮಕ್ಕಳಲ್ಲವೆ ಅವರಿಗೇನು ಮೂರು ಹೊತ್ತು ಊಟ, ಆಡಲಿಕ್ಕೆ ಕೆಲವು ಆಟಿಕೆಗಳು ಕೊಟ್ಟರಾಯ್ತು, ಇನ್ನೂ ಮುಂದುವರಿದು ಹಟಮಾಡುತ್ತಿದ್ದರೆ ಒಂದೆರಡು ಚಾಕೂಲೇಟ್ ಕೊಟ್ಟರಾಯ್ತು! ಎನ್ನುವ ಮನಸ್ಥಿತಿಯವರನ್ನು ಏನು ಮಾಡುವುದು? ಇವರೂ ಪಾಲಕರೇ ಒಪ್ಪಿಕೊಳ್ಳಬಹುದೇನೊ ಒಂದು ಹಂತಕ್ಕೆ. ಇನ್ನೂ ಮುಂದುವರಿದು ಸದ್ಯದ ವಾಸ್ತವದಲ್ಲಿ ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಕಾಣಸಿಗುವಂತಹ ದೃಷ್ಯವೆದರೆ ಮನೆಯ ಸೂಫಾದ ಒಂದು ಬದಿಯಲ್ಲಿ, ಇಲ್ಲವೇ ಬೆಡ್ ರೂಮಿನ ಒಂದು ಮೂಲೆಯಲ್ಲಿ ಒಂದಿದ್ದರೆ ಒಂದು ಮಗು, ಎರಡು ಇದ್ದರೆ ಎರಡೂ ಮಕ್ಕಳು ಕೈಯಲ್ಲೊಂದು ಮೊಬೈಲ್ ಹಿಡಿದು ತದೇಕ ಚಿತ್ತದಿಂದ ಕಣ್ಣು ಪಿಳಿಕಿಸದಂತೆ ಮೋಬೈಲ್ ಪರದಿಯನ್ನೇ ದಿಟ್ಟಿಸುತ್ತಾ, ತಮ್ಮಷ್ಟಕ್ಕೆ ತಾವೇ ನಗುತ್ತಾ ಪ್ರಪಂಚದ ಪರಿವೇ ಇಲ್ಲದಂತೆ ಕುಳಿತಿರುತ್ತವೆ.

ಇಂತಹ ಮಕ್ಕಳ ಪಾಲಕರೆ ಆಧುನಿಕ ಡ್ಯಾಡಿ–ಮಮ್ಮಿಗಳು! ಇವರ ಬಗ್ಗೆ ಹೇಳುವುದೇ ಬೇಡ, ಏಕೆಂದರೆ ಇಂತಹ ಈ ಪಾಲಕ ವರ್ಗ, ಅವರ ಮಕ್ಕಳ ಇಂತಹ ಪರಿಸ್ಥಿತಿಯನ್ನು ಸಮರ್ಥಿಸುವ ಪರಿಯೇ ಅದ್ಬುತ! ಏನು ಮಾಡ್ಲಿಕ್ಕೆ ಆಗುತ್ತೆ ನೀವೆ ಹೇಳಿ, ಬರೀ ಹಟ ಮಾಡುತ್ತಾರೆ, ಅದರಲ್ಲೂ ಮನೆಗೆ ಯಾರಾದರು ಬಂದಾಗಲೇ ಇವರ ಜಗಳ ರಗಳೆಗಳು ಜೋರಾಗಿರುತ್ತವೆ. ಊಟ ಮಾಡುವುದಿಲ್ಲ, ಮನೆಯ ಸಾಮಾನುಗಳನ್ನು ಸರಿಯಾಗಿ ಇಡುವುದಿಲ್ಲ, ಹೊರಗಡೆ ಹೋದರೆ ಸಾಕು, ಅದು ಬೇಕು ಇದು ಬೇಕು ಎಂದು ಹಟ ಮಾಡುತ್ತಾರೆ, ಇಲ್ಲವೆ ಆಟ ಆಟ ಆಟ



ಮೂರು ಹೊತ್ತು ಆಡಬೇಕು ಎನ್ನುತ್ತಾರೆ, ಒಂದು ಗಳಿಗೆ ಸಹ ಸುಮ್ಮನೆ ಕುಳಿತುಕೊಳ್ಳಲು ಬಿಡುವುದಿಲ್ಲ. ಇನ್ನೇನು ಮಾಡುವುದು, ಕೈಗೆ ಮೊಬೈಲ್ ಕೊಟ್ಟರೆ ಮಾತ್ರ ಊಟಾನು ಮಾಡ್ತಾರೆ, ಮನೆಯಲ್ಲಿ ಶಾಂತೀನು ಇರುತ್ತೆ, ಹಾಗಾಗಿ ಮನೆಗೆ ಯಾರಾದರು ಬಂದರೆ, ನಾನಂತು ಮಕ್ಕಳ ಕೈಗೆ ಮೊಬೈಲ್ ಕೊಟ್ಟು ಕುಳ್ಳರಿಸಿಬಿಡುತ್ತೇನೆ! ಎಂದು ಬಿಡುತ್ತಾರೆ.

ಇದರಲ್ಲೇನು ತಪ್ಪು ಈಗಿನ ಮಕ್ಕಳು ಇರೋದೆ ಹಾಗೆ ಎನ್ನುವವರಿದ್ದರೆ ನಿಮಗೊಂದಿಷ್ಟು ಪ್ರಶ್ನೆಗಳು, ನೀವೆ ಕೇಳಿಕೊಳ್ಳಿ ಮತ್ತು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಿ.



**ಜಿ. ಶಿವಕುಮಾರ್ ಸೋಗಿ,**
**ಕಾರವಾರ, ಕೈಗಾ.**
9008130204

1– ಮನೆಗೆ ಯಾರಾದರು ಅತಿಥಿಗಳು ಬಂದಾಗಲೇ ಮಕ್ಕಳೇಕೆ ಅತಿಯಾಗಿ ಹಟ ಮಾಡುತ್ತಾರೆ? ಎಂದಾದರು ಯೋಚಿಸಿದ್ದೀರಿ.

2– ಅದರಲ್ಲೂ ಮನೆಗೆ ಬಂದ ಅತಿಥಿಗಳು ಅವರ ಮಕ್ಕಳೊಂದಿಗೆ ಬಂದರಂತೂ ಇದು ಇನ್ನೂ ಹೆಚ್ಚಾಗುತ್ತದೆ(ಕೆಲವು ಮಕ್ಕಳನ್ನು ಹೊರತುಪಡಿಸಿ) ಏಕಿರಬಹುದು?.

3– ಮನೆಗೆ ಬಂದ ಅತಿಥಿಗಳನ್ನು ಅವರ ಮಕ್ಕಳನ್ನು ನೀವು ಸ್ವಲ್ಪ ಹೆಚ್ಚಾಗಿ ಉಪಚರಿಸಿದಾಗಲಂತೂ ನಿಮ್ಮ ಮಕ್ಕಳು ತಮ್ಮ ಅಸಮದಾನವನ್ನು ಇನ್ನೂ ಹೆಚ್ಚಾಗಿ ತೋರಿಸಲಿಕ್ಕೂ ಸಾಧ್ಯ ಏಕೆ?

4– ಪ್ರತಿ ದಿನ ನೀವು ನಿಮ್ಮ ಮಕ್ಕಳೊಂದಿಗೆ ಎಷ್ಟು ಸಮಯ ಉಳಿಯುತ್ತೀರಿ (ಅವರೊಂದಿಗಿನ ಕ್ರಿಯಾತ್ಮಕ ಸಮಯ, ಆಟ ಆಡುವುದು, ಮಾತನಾಡುವುದು, ಕಥೆ ಹೇಳುವುದು/ಕೇಳುವುದು, ಚಿತ್ರ ಬಿಡುಸುವುದು, ಕುಣಿಯುವುದು, ಹೋಂ ವರ್ಕ್ ಇತ್ಯಾದಿ).

5– ನಿಮ್ಮ ವೈಯಕ್ತಿಕ ಚಟುವಟಿಕೆಗಳಿಗೆ ( ಸ್ನೇಹಿತರು, ಕೆಲಸ, ಮನೋರಂಜನೆ ಇತ್ಯಾದಿ) ಕೊಡುವಷ್ಟು ಸಮಯ ಮತ್ತು ಪ್ರಾಮುಖ್ಯತೆಯನ್ನು ನಿಮ್ಮ ಮಕ್ಕಳ ವೈಯಕ್ತಿಕ ಚಟುವಟಿಕೆಗಳಿಗೆ ಕೊಟ್ಟಿದ್ದೀರಾ?

ನಿಮ್ಮ ಉತ್ತರ ಏನೆ ಆಗರಲಿ, ಗೊತ್ತಿದ್ದೊ ಗೊತ್ತಿಲ್ಲದಯೊ ನೀವು ನಿಮ್ಮ ಮಕ್ಕಳೊಂದಿಗೆ ಇಂತಹ ಸನ್ನಿವೇಶಗಳಿಗೆ ಅನೇಕ ಬಾರಿ ಸಾಕ್ಷಿಯಾಗಿರುತ್ತೀರಿ ಮತ್ತು ಇದು ನಿಮ್ಮ ಪ್ರಕಾರ ಸಹಜವಾಗಿಯೇ ಇರುತ್ತದೆ.

# **ಸಾಮಾನ್ಯ ಪಾಲಕರಾದವರು ಮಾಡುವಂತಹದ್ದು ಏನಾಗಿರಬಹುದು ಎಂಬುದನ್ನು ನೋಡುವುದಾದರೆ.**

1– ನಿಮ್ಮ ಮಕ್ಕಳನ್ನು ಮೊದಲೇ ಹೆದರಿಸಿ ಇಲ್ಲವೆ ಗದರಿಸಿ ಮನೆಗೆ ಅತಿಥಿಗಳು ಬಂದಾಗ ಸುಮ್ಮನಿರಬೇಕು, ಇಲ್ಲವಾದರೆ ತದನಂತರ ಶಿಕ್ಷೆಯನ್ನು ಕೊಡಲಾಗುತ್ತದೆ ಎಂದು ಮೊದಲೇ ಹೇಳಿ ಇಡುವುದು.

2– ನಿಮ್ಮ ಮನೆಗೆ ಬಂದ ಅತಿಥಿಗಳ ಸಂತೋಷಕ್ಕಾಗಿ ಅವರ ಮಕ್ಕಳಿಗೆ ವಿಶೇಷ ಆತಿಥ್ಯ ನೀಡುವ ಭರದಲ್ಲಿ ನಿಮ್ಮ ಮಕ್ಕಳನ್ನು ಅವರ ಮುಂದೆ ಕೀಳಾಗಿ ಹೋಲಿಕೆ ಮಾಡುವುದು(ಉದಾ: ಅವರನ್ನು ನೋಡಿ ಕಲಿಯಿರಿ, ಅವರಂತೆ ಶಿಸ್ತು ನಿಮ್ಮಲ್ಲಿ ಇಲ್ಲ ಇತ್ಯಾದಿ..).

3– ನಿಮ್ಮ ಮಕ್ಕಳ ಸಣ್ಣ ಸಣ್ಣ ತಪ್ಪುಗಳಿಗೂ ಗದರವು ನೀವು, ನಿಮ್ಮ ಮನೆಗೆ ಬಂದ ಅತಿಥಿಗಳ ಅಥವಾ ಬೇರೆಯವರ ಮಕ್ಕಳ ತಪ್ಪುಗಳನ್ನು "ಇರಲಿ ಬಿಡಿ ಮಕ್ಕಳು ತಾನೆ" ಎಂದು ಸಲಿಸಾಗಿ ಕ್ಷಮಿಸಿ ಬೀಡುತ್ತೀರಿ ಅಲ್ಲವೇ?.

4– ನಿಮ್ಮ ಮಕ್ಕಳು ಬಯಸುವಂತಹ ಸಹಕಾರವನ್ನು ಅವರ ಚಟುವಟಿಕೆಗಳಿಗೆ ನೀವು ನೀಡುವುದಿಲ್ಲ. ಏಕೆಂದರೆ ಮಕ್ಕಳ ಆ ಎಲ್ಲಾ ಚಟುವಟಿಕೆಗಳು ನಿಮ್ಮ ದೃಷ್ಟಿಕೋನದಲ್ಲಿ ಬಹಳ ಸಣ್ಣವು ಮತ್ತು ನಿರುಪಯುಕ್ತ ಹಾಗು ಅದರಿಂದ ಕೇವಲ ಸಮಯ ಹಾಳು ಎನ್ನುವ ಮನಸ್ಥಿತಿ ನಿಮ್ಮದಾಗಿರುತ್ತದೆ.

5– ನಿಮ್ಮಂತೆಯೆ ನಿಮ್ಮ ಮಕ್ಕಳಿಗೂ ಅವರದೇ ಆದ ಸ್ನೇಹಿತರ ಪ್ರಪಂಚ ಇದೆ ಎನ್ನುವುದನ್ನು ಮರೆಯಬಾರದು. ಮೇಲಾಗಿ ದೊಡ್ಡವರಿಗಿಂತ ಮಕ್ಕಳಿಗೆ ಸ್ನೇಹ ಮತ್ತು ಸ್ನೇಹಿತರ ಅವಶ್ಯಕತೆ ಹೆಚ್ಚಾಗಿರುತ್ತದೆ. ಸ್ನೇಹಿತರ ಹೊರತಾಗಿಯೂ ನೀವು ದಿನ ಕಳೆಯಬಹುದು ಆದರೆ ಮಕ್ಕಳಿಗೆ ಸ್ನೇಹಿತರೆ ಅವರ ಪ್ರಪಂಚ ನೆನಪಿರಲಿ.

# **ಹಾಗಾದರೆ ಜವಾಬ್ದಾರಿಯುತ ಪಾಲಕರಾದವರು ಏನು ಮಾಡುತ್ತಾರೆ ಎಂದು ಗಮನ ಹರಿಸುವುದಾದರೆ.**

1– ಮನೆಗೆ ಬರುವವರು ಯಾರೇ ಆಗರಲಿ ಅವರ ಬಗ್ಗೆ ಅವರ ಹಿರಿತನ ಬಗ್ಗೆ ಅವರ ಹೆಚ್ಚುಗಾರಿಕೆಯ ಬಗ್ಗೆ ಹೆಮ್ಮೆಯಿಂದ ಹೇಳಿ, ಆದರೆ ಅವರು ಬಂದಾಗ ನೀವು ಹೀಗೆ ಇರಬೇಕು ಎಂದು ನಿಮ್ಮ ಮಕ್ಕಳಿಗೆ ತಾಕೀತು ಮಾಡುವುದಾದರೆ, ನಿಮ್ಮ ಮಕ್ಕಳ ಮನಸ್ಸಿಮಲ್ಲಿ ಮೂಡುವ ಮೊದಲ ಪ್ರಶ್ನೆ ನಮ್ಮ ಪಾಲಕರಿಗೆ ನಮಗಿಂತ ಅವರೇ ಮುಖ್ಯ ಮತ್ತು ನಮ್ಮ ಕಡೆಗಹನೆಯಾಗುತ್ತದೆ ಎನ್ನುವ ಅಭದ್ರೆತೆಯ ಭಾವನೆ ಜಾಗೃತವಾಗುತ್ತದೆ–ನೆನಪಿರಲಿಮಕ್ಕಳುಅಭದ್ರತೆಯನ್ನುಸಹಿಸಿಕೊಳ್ಳುವಷ್ಟು ಪ್ರಭುದ್ದರಾಗಿರುವುದಿಲ್ಲ.

2– ಯಾರದೋ ಸಂತೋಷಕ್ಕಾಗಿ ನಿಮ್ಮ ಮಕ್ಕಳನ್ನು ಇತರರೊಂದಿಗೆ ಹೋಲಿಸುವ ಅಗತ್ಯವಿಲ್ಲ, ಇದರಿಂದ ನಿಮ್ಮ ಮಕ್ಕಳಲ್ಲಿ ಕೀಳರಿಮೆ ಬೆಳೆಯಲು ನೀವೇ ಕಾರಣರಾಗಿಬಿಡುತ್ತೀರಿ–ನೆನೆಪಿರಲಿ ಜಗತ್ತಿನಲ್ಲಿ ಎಲ್ಲರೂ ಒಬ್ಬರಿಗಿಂತ ಒಬ್ಬರು ಬಿನ್ನರು ಮತ್ತು ವಿಭಿನ್ನ ಆಸಕ್ತಿ ಹಾಗು ಸಾಮರ್ಥ್ಯಗಳನ್ನು ಹೊಂದಿರುತ್ತಾರೆ.

3– ಇತರರ ಮಕ್ಕಳನ್ನು ಹೊಗಳುವುದು ಒಳ್ಳೆಯದೇ, ಆದರೆ ನಿಮ್ಮ ಮಕ್ಕಳು ಹಾಗಿಲ್ಲವಲ್ಲ ಎನ್ನುವುದು ಸರಿಯಲ್ಲ. ನಿಮ್ಮ ಮಕ್ಕಳಲ್ಲಿರುವ ಒಳ್ಳೆಯ ಆಚರಣಾ ಯೋಗ್ಯವಾದ ಗುಣಗಳನ್ನೂ ಇತರರೊಂದಿಗೆ ಹಂಚಿಕೊಳ್ಳಿ ಏಕೆಂದರೆ –ನೀವು ನಿಮ್ಮ ಮಕ್ಕಳಿಗೆ ಸ್ವಂತ, ನಿಮ್ಮ ಒಂದು ಪ್ರಶಂಸೆ ನಿಮ್ಮ ಮಕ್ಕಳಲ್ಲಿ ಆಗಾದವಾದ ಬದಾಲಾವಣೆಗೆ ಕಾರಣವಾಗಬಹುದು ಹಾಗೆಯೇ ನಿಮ್ಮ ಒಂದು ತಿರಸ್ಕಾರ ನಿಮ್ಮ ಮಕ್ಕಳ ಮಾನಸಿಕ ಸ್ವಾಸ್ಥ್ಯವನ್ನೇ ಕಸಿದುಬಿಡಬಹುದು.

4– ನಿಮ್ಮ ಮಕ್ಕಳ ದೈನಂದಿನ ಚಟುವಟಿಕೆಗಳು ನಿಮ್ಮ ದೃಷ್ಟಿಯಲ್ಲಿ ಸಣ್ಣದಾಗಿರಬಹುದು, ಆದರೆ ನಿಮ್ಮ ಮಕ್ಕಳಿಗೆ ಅವುಗಳೆ ಮಹತ್ತರವಾದ ಸಾಧನೆಗಳು– ಇಂತಹ ಸಣ್ಣ ಸಣ್ಣ ಚಟುವಟಿಕೆಗಳನ್ನೂ ಆನಂದಿಸಬೇಕು, ಅವರನ್ನು ಹುರಿದುಂಬಿಸಬೇಕು–ಇಂತಹ ಸಣ್ಣ ಸಣ್ಣ ಚಟುವಟಿಕೆಗಳೇ ಮುಂದಿನ ದೊಡ್ಡ ದೊಡ್ಡ ಸಾಧನೆಗಳಿಗೆ ಮೆಟ್ಟಿಲುಗಳಾಗುತ್ತವೆ.

5– ನಿಮ್ಮಂತೆಯೇ ನಿಮ್ಮ ಮಕ್ಕಳಿಗೂ ಅವರದೇ ಆದ ಜಗತ್ತು ಎನ್ನುವುದು ಇದೆ, ಅದರಲ್ಲಿ ಅವರ ಸ್ನೇಹಿತರೆ ಸಿಂಹಪಾಲನ್ನು ಆಕ್ರಮಿಸಿರುತ್ತಾರೆ– ಯಾವುದೇ ಕಾರಣಕ್ಕೂ ಅವರ ಈ ಭಾವನೆಗೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕಾಗುತ್ತದೆ.

ಹೀಗೆ ಇದಲ್ಲೆವೂ ಸಾಧ್ಯವಾಗಬೇಕೆಂದರೆ, ಮಕ್ಕಳ ಕುರಿತಾಗಿ ಪಾಲಕರಾದ ನಮ್ಮ ನಿಮ್ಮೆಲ್ಲರ ಯೋಚನೆಗಳು ಮಕ್ಕಳ ಮಾನಸಿಕ ಸ್ಥಿತಿಗೆ ಅನುಗುಣವಾಗಿರಬೇಕು, ಮಕ್ಕಳ ಅಗತ್ಯಕ್ಕೆ ತಕ್ಕಂತೆ ಯೋಚನೆ ಮಾಡುವುದು, ಮಕ್ಕಳ ಮಾನಸಿಕತೆಯನ್ನು ಅರ್ಥಮಾಡಿಕೊಳ್ಳಬೇಕು, ಅವರಂತೆ ಮುಗ್ಧವಾಗಿ ಮತ್ತು ಮುಕ್ತವಾಗಿ ಇರುವಂತಹ ಮನಸ್ಥಿತಿಯನ್ನು ಹೊಂದಬೇಕು.

ಅತೀ ಎನಿಸಿದರೂ ಇದೇ ಸತ್ಯ ಒಂದು ಹಂತಕ್ಕೆ ನಾವು ಮಕ್ಕಳೇ ಆಗಿಬಿಡಬೇಕು! ಅದಕ್ಕೆ ಹೇಳಿದ್ದು "ಏನಾದರಾಗು ಮೊದಲು ಮಗುವಾಗು" ಏಕೆಂದರೆ ಮಾನವನಾಗುವ ಮೊದಲ ಹೆಜ್ಜೆಯೇ ಮಗುವಾಗುವುದು.

# ನಗರ ಸ್ವಚ್ಛತೆಗೆ ಪೌರಕಾರ್ಮಿಕರ ಪಾತ್ರ ಅತ್ಯಗತ್ಯ

## ಸಚಿವ ಬಿ.ನಾಗೇಂದ್ರ ಹೇಳಿಕೆ | 132 ಪೌರ ಕಾರ್ಮಿಕರಿಗೆ ನೇಮಕಾತಿ ಆದೇಶ ಪತ್ರ ವಿತರಣೆ

■ **ಹಂಪಿ ಟೈಮ್ಸ್ ಬಳ್ಳಾರಿ**

ನಗರದಲ್ಲಿ ದಿನನಿತ್ಯದ ಸ್ವಚ್ಛತೆ ಸೇವೆ ಸೇರಿದಂತೆ ನಗರ ಸುಂದರೀಕರಣಕ್ಕೆ ಪೌರಕಾರ್ಮಿಕರ ಪಾತ್ರ ಅತ್ಯಗತ್ಯವಾಗಿದೆ ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ಅವರು ಹೇಳಿದರು.

ಇಲ್ಲಿಯ ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ 132 ಪೌರಕಾರ್ಮಿಕರಿಗೆ ನೇಮಕಾತಿ ಆದೇಶ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಳ್ಳಾರಿ ನಗರವನ್ನು ಸ್ವಚ್ಛ ಮತ್ತು ಸುಂದರವನ್ನಾಗಿ ಮಾಡಲು ಪಣ ತೊಟ್ಟಿದ್ದು, ಹಂತ ಹಂತವಾಗಿ ಪೌರ ಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು. ಈಗಾಗಲೇ ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 341 ಪೌರಕಾರ್ಮಿಕರಲ್ಲಿ ಮೊದಲ ಹಂತವಾಗಿ 132 ಪೌರ ಕಾರ್ಮಿಕರಿಗೆ ನೇಮಕಾತಿ ಆದೇಶ ಪತ್ರಗಳನ್ನು ವಿತರಿಸಲಾಗುತ್ತಿದೆ ಎಂದರು.

ಖಾಯಂ ಉದ್ಯೋಗದ ಜೊತೆಗೆ ಭದ್ರತಾ ಸೇವೆ ಮತ್ತು ನೇಮಕಾತಿ ಆದೇಶ ಪತ್ರ ವಿತರಿಸಲಾಗಿದೆ. ಎರಡನೇ ಹಂತವಾಗಿ ಇನ್ನುಳಿದ ಪಾಲಿಕೆಯ ವಾಹನ ಚಾಲಕರು ಮತ್ತು ಪೌರಕಾರ್ಮಿಕರಿಗೆ ನೇಮಕಾತಿ ಆದೇಶ ಪತ್ರ ವಿತರಿಸಲಾಗುವುದು ಎಂದು ಹೇಳಿದರು.




ನೇಮಕಾತಿ ಪತ್ರ ಪಡೆದ ಎಲ್ಲಾ ಪೌರಕಾರ್ಮಿಕರು ಸಹ ತಮ್ಮ ಆರೋಗ್ಯದ ಕಡೆಗೆ ಗಮನ ನೀಡಬೇಕು. ಈ ದಿನ ಎಲ್ಲರ ಮುಖದಲ್ಲಿ ಮಂದಹಾಸವಿದೆ. ಬಹಳ ದಿನಗಳ ಬೇಡಿಕೆ ಈಗ ಈಡೇರಿದೆ. ಮುಂದಿನ ದಿನಗಳಲ್ಲಿ ಇನ್ನುಳಿದ ಪೌರಕಾರ್ಮಿಕರ ನೇಮಕಕ್ಕೆ ಕ್ರಮ ವಹಿಸಲಾಗುವುದು. ಯಾರೂ ಆತಂಕ ಪಡಬಾರದು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರದ 4 ಗ್ಯಾರಂಟಿ ಯೋಜನೆಗಳು ಸಕಾಲದಲ್ಲಿ ತಲುಪುತ್ತಿದೆಯೇ ಎಂದು ವಿಚಾರಿಸಿದರು. ನಂತರ 132 ಪೌರಕಾರ್ಮಿಕರಿಗೆ ನೇಮಕಾತಿ ಆದೇಶ ಪತ್ರ ವಿತರಣೆ ಮಾಡಿದರು.

**341 ಪೌರಕಾರ್ಮಿಕರಲ್ಲಿ ಮೊದಲ ಹಂತವಾಗಿ 132 ಪೌರ ಕಾರ್ಮಿಕರಿಗೆ ನೇಮಕಾತಿ ಆದೇಶ ಪತ್ರಗಳನ್ನು ವಿತರಣೆ**

ಈ ಸಂದರ್ಭದಲ್ಲಿ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಮಹಾನಗರ ಪಾಲಿಕೆ ಆಯುಕ್ತ ಜಿ.ಖಲೀಲ್ ಸಾಬ್, ವಕ್ಫ್ ಮಂಡಳಿ ಅಧ್ಯಕ್ಷ ಹುಮಾಯೂನ್ ಖಾನ್, ಪಾಲಿಕೆಯ ಸ್ಥಾಯಿ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು, ಜನಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನೀಡುವ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಮಹಿಳಾ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸಂಸ್ಥೆ ಹಾಗೂ ಅರ್ಹ ವ್ಯಕ್ತಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್‌ಕುಮಾರ್ ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಪ್ರಚಲಿತ ವಿದ್ಯಮಾನಗಳಿಂದ ಮಹಿಳಾ ಕ್ಷೇತ್ರದಲ್ಲಿ ಮತ್ತು ಕಳೆದ 5 ವರ್ಷಗಳಿಂದ ಮಹಿಳಾ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಅರ್ಹ ಸಂಸ್ಥೆಗಳು ಹಾಗೂ ಇತರೆ ವಿವಿಧ 5 ಕ್ಷೇತ್ರಗಳಾದ ಕ್ರೀಡೆ, ಕಲೆ, ಸಾಹಿತ್ಯ, ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ ಮಹಿಳೆಯರಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಹಾಗೂ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಆತ್ಮಸ್ಥೈರ್ಯದಿಂದ ಹೋರಾಡಿ ಜೀವನೋಪಾಯದಿಂದ ಪಾರು ಮಾಡಿದಂತಹ ಮಹಿಳೆಗೆ ವೀರ ಮಹಿಳೆ ಪ್ರಶಸ್ತಿ ನೀಡಲು ಉದ್ದೇಶಿಸಿದ್ದು, ಅರ್ಹ ಮಹಿಳೆಯರು ನಿಗದಿತ ನಮೂನೆಯನ್ನು ಭರ್ತಿ ಮಾಡಿದ ಅರ್ಜಿಯೊಂದಿಗೆ ಅವಶ್ಯಕ ದಾಖಲೆಗಳನ್ನು ಲಗತ್ತಿಸಿ ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಎಸ್.ಪಿ. ಸರ್ಕಲ್, ದೇವಿನಗರ, ಬಳ್ಳಾರಿ. ಇಲ್ಲಿಗೆ 2024ರ ಜನವರಿ 10 ರೊಳಗಾಗಿ ಅರ್ಜಿ ಸಲ್ಲಿಸಬೇಕು.

**ಷರತ್ತುಗಳು:** 18 ರಿಂದ 45 ವರ್ಷ ವಯೋಮಿತಿ ಹೊಂದಿರಬೇಕು. ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ವೇತನ ಪಡೆಯುತ್ತಿರುವ ವ್ಯಕ್ತಿಗಳು ಅರ್ಹರಾಗಿರುವುದಿಲ್ಲ. ವೀರ ಮಹಿಳೆ ಪ್ರಶಸ್ತಿ ಪಡೆಯುವ ಮಹಿಳೆಯು ವಿಶೇಷ ಶೌರ್ಯ ಹಾಗೂ ಸಾಧನೆಯನ್ನು ಮಾಡಿರಬೇಕು. ಈ ಸಾಧನೆಯು ಸಾರ್ವಜನಿಕರ ಗಮನಕ್ಕೆ ಬಂದಿರಬೇಕು. ಈ ಸಾಧನೆಯು ಪ್ರಶಸ್ತಿ ಪಡೆಯುವ ಕಳೆದ ಸಾಲಿನ ಜನವರಿ 1 ರಿಂದ ಡಿಸೆಂಬರ್ 31ರ ಒಳಗೆ ಇರಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.08392–266219ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY



Spend LESS and get MORE publicity

BENEFITS OF ADVERTISING
in Local Leading HAMPI TIMES Newspaper

1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options



CALL US : 9448633038

Email us Your Advertisement Content to : hampitimes@gmail.com



ಸಂಪುಟ:01 • ಸಂಚಿಕೆ:198 • ನೋಂದಣಿ ನಂ.:KARKAN27911 • ವಿಜಯನಗರ • 31.12.2023 • ಭಾನುವಾರ • ಪುಟ:04 • ಬೆಲೆ:2

Volume:01 • Issue:198 • Reg.No:KARKAN27911 • VIJAYANAGARA • 31.12.2023 • Sunday • Page:04 • Rs:2


# ಬಡವರಿಗೆ ವರವಾದ ಐದು ಗ್ಯಾರಂಟಿಗಳು ನವಿಲೆ ಅಣೆಕಟ್ಟು ನಿರ್ಮಿಸಲು ನಾವು ಬದ್ಧ

## ಸಿಎಂ ಸಿದ್ದರಾಮಯ್ಯ ಹೇಳಿಕೆ | ಬರಗಾಲದಲ್ಲಿ ಬಡವರು ಸಂಕಷ್ಟದಿಂದ ಪಾರು | ಬಿಜೆಪಿಗೆ ನುಂಗಲಾರದ ತುತ್ತು

**ಹಂಪಿ ಟೈಮ್ಸ್ ಸಿಂಧನೂರು**

ನಮ್ಮ ಗ್ಯಾರಂಟಿ ಯೋಜನೆಗಳಿಂದಾಗಿ ಬರಗಾಲದಲ್ಲೂ ರಾಜ್ಯದ ಬಡವರು ಸಂಕಷ್ಟದಿಂದ ಪಾರಾಗಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭರವಸೆ ನೀಡಿದರು.

ಸಿಂಧನೂರಿನಲ್ಲಿ ನಡೆದ ಬೃಹತ್ ಕಾರ್ಯಕ್ರಮದಲ್ಲಿ ತಿಮ್ಮಾಪೂರ ಏತ ನೀರಾವರಿ ಯೋಜನೆ ಲೋಕಾರ್ಪಣೆ ಮಾಡಿ, ಜಲ ಜೀವನ್ ಮಿಷನ್ (DBOT) ಯೋಜನೆಯ ಶಂಕುಸ್ಥಾಪನೆ ನೆರವೇರಿಸುವ ಜತೆಗೆ ಸಿಂಧನೂರು ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆಯನ್ನು ನೆರವೇರಿಸಿ ಮಾತನಾಡಿದರು.

ನಾವು ಐದೂ ಗ್ಯಾರಂಟಿಗಳನ್ನು ಜಾರಿ ಮಾಡಿದ್ದು ಬಿಜೆಪಿಯವರಿಗೆ ನುಂಗಲಾರದ ತುತ್ತಾಗಿದೆ. ಮೋದಿ ಅವರು ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಭಾಷಣ ಮಾಡಿದ್ದರು. ಆದರೆ ಅವರ ಮಾತು ಮತ್ತೊಮ್ಮೆ ಸುಳ್ಳಾಗಿದೆ ಎಂದು ಟೀಕಿಸಿದರು. 120 ಕೋಟಿ ಮಹಿಳೆಯರು ಉಚಿತವಾಗಿ ಬಸ್ ನಲ್ಲಿ ಪ್ರಯಾಣ ಮಾಡಿದ್ದಾರೆ. 1.16 ಕೋಟಿ ಮಹಿಳೆಯರ ಖಾತೆಗೆ ತಿಂಗಳಿಗೆ 2 ಸಾವಿರ ಕೊಡಲಾಗುತ್ತಿದೆ. ಹೀಗೆ ಪ್ರತಿ ಕುಟುಂಬಕ್ಕೆ ತಿಂಗಳಿಗೆ 5–6 ಸಾವಿರ ರೂಪಾಯಿ ಉಳಿತಾಯ ಆಗುತ್ತಿದೆ. ನಾವು ಕನ್ನಡಿಗರು ಪ್ರತೀ ವರ್ಷ ಕೇಂದ್ರಕ್ಕೆ 4 ಲಕ್ಷ ಕೋಟಿ ತೆರಿಗೆ ರೂಪದಲ್ಲಿ ಹಣ ಕೊಡ್ತೀವಿ. ಆದರೆ ಕೇಂದ್ರ ನಮಗೆ ವಾಪಾಸ್ ಕೊಡುವುದು 52 ಸಾವಿರ ಕೋಟಿ ಮಾತ್ರ. ಬರಗಾಲ ಬಂದಿದ್ದರೂ ಕೇಂದ್ರದಿಂದ ನಯಾಪೈಸೆ ಬಂದಿಲ್ಲ. ಇದನ್ನು ರಾಜ್ಯದ ಜನತೆ ಬಿಜೆಪಿ ಸಂಸದರಿಗೆ ಪ್ರಶ್ನಿಸಬೇಕು ಎಂದು ಕರೆ ನೀಡಿದರು.



ಕೇಂದ್ರ ಸರ್ಕಾರ ರಾಜ್ಯ ಜನರ ನೆರವಿಗೆ ಬರದಿದ್ದರೂ ನಾವು ರಾಜ್ಯದ ಜನರ ಕೈ ಬಿಡುವುದಿಲ್ಲ. ಹಿಂದಿನ ಬಿಜೆಪಿ ಸರ್ಕಾರ ನೀರಾವರಿ ಹೆಸರಲ್ಲಿ ಹಣ ತಿಂದು ತೇಗಿ ಹೋಗಿದೆ. ಆದರೂ ನಾವು ರಾಜ್ಯದ ಜನರಿಗೆ ಅಗತ್ಯ ನೀರಾವರಿ ಸವಲತ್ತು ಒದಗಿಸುತ್ತೇವೆ ಎಂದು ಭರವಸೆ ನೀಡಿದರು. ಸಿಂಧನೂರಿಗೆ ಇದುವರೆಗೂ ಶೇ.80 ರಷ್ಟು ನೀರಾವರಿ ಸವಲತ್ತು ಸಿಕ್ಕಿದೆ. ಶಾಸಕರು ನೂರಕ್ಕೆ ನೂರರಷ್ಟು ನೀರಾವರಿ ಮಾಡಲು ಬದ್ದರಾಗಿದ್ದಾರೆ. ನಮ್ಮ ಸರ್ಕಾರ ಇದಕ್ಕೆ ಸಂಪೂರ್ಣ ಸಹಕಾರ ನೀಡಿ ರೈತರ ಬದುಕನ್ನು ಉನ್ನತೀಕರಿಸಲು ನಾವು ಬದ್ದರಾಗಿದ್ದೇವೆ. ನವಿಲೆ ಬ್ಯಾಲೆನ್ಸಿಂಗ್ ಅಣೆಕಟ್ಟು ನಿರ್ಮಿಸಲು ನಮ್ಮ ಸರ್ಕಾರ ಸಿದ್ಧವಿದೆ ಎಂದು ಭರವಸೆ ನೀಡಿದರು.

ಹಂಪನಗೌಡ ಬಾದರ್ಲಿ ಸಜ್ಜನ ಮತ್ತು ಅಭಿವೃದ್ಧಿ ಬಗ್ಗೆ ಹೆಚ್ಚು ಶ್ರಮಿಸುವ ಶಾಸಕರು. ಇವರಂತೆಯೇ ಎಲ್ಲಾ ಶಾಸಕರು ಶ್ರಮಿಸಿದರೆ ಇಡಿ ರಾಜ್ಯ ಮತ್ತು ಹೈದರಾಬಾದ್ ಕರ್ನಾಟಕ ಹೆಚ್ಚು ಅಭಿವೃದ್ಧಿಯಾಗುತ್ತದೆ ಎಂದು ಶಾಸಕರ ಕಾರ್ಯಕ್ಷಮತೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

**ಚಾಲನೆ ದೊರೆತ ಅಭಿವೃದ್ಧಿ ಕಾರ್ಯಗಳ ಪಟ್ಟಿ...**

- ತಿಮ್ಮಾಪೂರ ಏತ ನೀರಾವರಿ ಯೋಜನೆ
- ಜಲ ಜೀವನ್ ಮಿಷನ್
- ಸರಕಾರಿ ಪದವಿ ಮಹಾವಿದ್ಯಾಲಯದ ಸುವರ್ಣ ಮಹೋತ್ಸವ
- ಕರ್ನಾಟಕ ಸಂಭ್ರಮ–50ರ ಪ್ರಯುಕ್ತ ಕನ್ನಡ ರಥದ ಮೆರವಣಿಗೆಗೆ ಚಾಲನೆ
- ಹದಿಹರೆಯದ ಹೆಣ್ಣುಮಕ್ಕಳಿಗೆ ಉಚಿತ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್ ವಿತರಣೆ
- ಸಿಂಧನೂರು ನಗರ ಸಂಚಾರ ಪೊಲೀಸ್ ಠಾಣೆ ಕಟ್ಟಡದ ಉದ್ಘಾಟನೆ

ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ ಅವರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಜಿಲ್ಲೆಯ ಶಾಸಕರುಗಳಾದ ಹಂಪಯ್ಯ ನಾಯಕ್, ಮಾನಪ್ಪ ಡಿ.ವಜ್ಜಲ್, ಬಸವನಗೌಡ ದದ್ದಲ್, ಡಾ.ಎಸ್.ಶಿವರಾಜ್ ಪಾಟೀಲ್, ಆರ್. ಬಸವನಗೌಡ ತುರ್ವಿಹಾಳ, ಶರಣಗೌಡ ಪಾಟೀಲ್ ಬಯ್ಯಾಪುರ ಸೇರಿ ಹಲವು ಮುಖಂಡರು, ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

---

**ಮೈಕ್ರೋ ನ್ಯೂಸ್**

## ಪ್ರಥಮ ಮುದ್ರಣ ಪುಸ್ತಕಗಳ ಆಯ್ಕೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಿಗೆ 2023ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ವಿವಿಧ ಪ್ರಕಾರದ ಪುಸ್ತಕಗಳ ಆಯ್ಕೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಸಾಹಿತ್ಯ, ಕಲೆ, ವಿಜ್ಞಾನ, ವೃತ್ತಿ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಆದಾಯ ಉತ್ಪಾದನಾ ಯೋಜನೆ, ಸ್ಪರ್ಧಾತ್ಮಕ, ಪಠ್ಯ ಪುಸ್ತಕ, ಸಾಂದರ್ಭಿಕ ಮತ್ತು ಪರಾಮರ್ಶನ ಕೃತಿಗಳು ಹಾಗೂ ಮಕ್ಕಳ ಸಾಹಿತ್ಯ, ನವಸಾಕ್ಷರರ ಕೃತಿಗಳು ಇತ್ಯಾದಿ ವಿಷಯಗಳನ್ನು ಕನ್ನಡ, ಆಂಗ್ಲ, ಇತರೆ ಭಾರತೀಯ ಭಾಷೆಗಳ ಗ್ರಂಥಗಳ ಆಯ್ಕೆಗಾಗಿ ಲೇಖಕರು, ಲೇಖಕ–ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳು ಪುಸ್ತಕ ಆಯ್ಕೆ ಸಮಿತಿಯಿಂದ ಅರ್ಜಿ ಸಲ್ಲಿಸಬಹುದಾಗಿದೆ.


ಅರ್ಜಿಯನ್ನುಮುಖ್ಯಗ್ರಂಥಾಲಯಾಧಿಕಾರಿಗಳ ಕಚೇರಿ, ನಗರ ಕೇಂದ್ರ ಗ್ರಂಥಾಲಯ, ಹೊಸಪೇಟೆ ಇಲ್ಲಿ ಪಡೆಯಬಹುದು. 2023ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾದ ಪುಸ್ತಕಗಳನ್ನು ಗ್ರಂಥ ಸ್ವಾಮ್ಯ ವಿಭಾಗ, ರಾಜ್ಯ ಕೇಂದ್ರ ಗ್ರಂಥಾಲಯ, ಬೆಂಗಳೂರು ಇಲ್ಲಿ 31.01.2024ರ ಒಳಗಾಗಿ ಕಾಪಿರೈಟ್ ಮಾಡಿಸಿರುವ ಪುಸ್ತಕಗಳನ್ನು ಮಾತ್ರ ಆಯ್ಕೆಗಾಗಿ ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನುನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ 4ನೇ ಮಹಡಿ ಡಾ॥ ಅಂಬೇಡ್ಕರ ವಿಧಿ ಬೆಂಗಳೂರು, ಈ ವಿಳಾಸಕ್ಕೆ 2024ರ ಫೆಬ್ರವರಿ 5ರ ಸಂಜೆ 5ಗಂಟೆಯೊಳಗಾಗಿ ಸಲ್ಲಿಸಬೇಕು.

ಮಾಹಿತಿಗಾಗಿ ದೂ.ಸಂ: 080–22864990 /22867358 ಕ್ಕೆ ಸಂಪರ್ಕಿಸಬಹುದಾಗಿದೆ ಎಂದು ಹೊಸಪೇಟೆನಗರ ಕೇಂದ್ರ ಗ್ರಂಥಾಲಯಮುಖ್ಯ ಗ್ರಂಥಾಲಯಾಧಿಕಾರಿ ವಿನೋದರಾಜ್ ಎಸ್. ತಿಳಿಸಿದ್ದಾರೆ.

**ಮಕ್ಕಳು ಅರಸರಾಗಬೇಕೆ?**

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

**ತುಂಗಭದ್ರಾ ನೀರಿನ ಮಟ್ಟ**



| ಶನಿವಾರ : 30-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1589.10 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 293 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.295 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1625.13 ಅಡಿ |
| ಒಳ ಹರಿವು | 426 ಕ್ಯುಸೆಕ್ |
| ಹೊರ ಹರಿವು | 8956 ಕ್ಯುಸೆಕ್ |
| ಸಾಮರ್ಥ್ಯ | 76.912 ಟಿಎಂಸಿ |


**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.


---

## ಉತ್ತಮ ಆರೋಗ್ಯಕ್ಕೆ ಸಿರಿಧಾನ್ಯ ಬಳಸಿ

### ಕೊಟ್ಟೂರು ತಾಲೂಕು ಯೋಜನಾಧಿಕಾರಿ ಹೆಚ್. ಡಿ ನವೀನ ಕುಮಾರ್ ಹೇಳಿಕೆ | ಸಿರಿ ಧಾನ್ಯ ಮೇಳ




**ಹಂಪಿ ಟೈಮ್ಸ್ ಕೊಟ್ಟೂರು**

ಮನುಷ್ಯ ಕಟ್ಟಿಮುಟ್ಟಾಗಿರಲು ಮತ್ತು ಉತ್ತಮ ಆರೋಗ್ಯ ಕಾಯ್ದುಕೊಳ್ಳಲು ಸಿರಿಧಾನ್ಯಗಳನ್ನು ದಿನನಿತ್ಯ ಬಳಕೆ ಮಾಡಬೇಕು ಎಂದು ಕೊಟ್ಟೂರು ತಾಲೂಕು ಯೋಜನಾಧಿಕಾರಿ ಹೆಚ್. ಡಿ ನವೀನ ಕುಮಾರ್ ಹೇಳಿದರು.

ಮೊರಬ ವಲಯದ ತಾಲೂಕಿನ ದುಪದಹಳ್ಳಿ ಕಾರ್ಯಕ್ಷೇತ್ರದ ಸಿಂಧೂರ ಜ್ಞಾನ ವಿಕಾಸ ಕೇಂದ್ರದಲ್ಲಿ ಏರ್ಪಡಿಸಿದ್ದ ಸಿರಿ ಧಾನ್ಯ ಮೇಳ ಕಾರ್ಯಕ್ರಮದ ಉದ್ಘಾಟಿಸಿ ನಂತರ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಒಕ್ಕೂಟದ ಅಧ್ಯಕ್ಷರು ಯಶೋಧ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರು ಹಂಪಿಬಾಯಿ ಮತ್ತು ಊರಿನ ಮುಖಂಡರಾದ ಅಳವಂಡಿ ಕೊಟ್ರಬಸಪ್ಪ ಹಾಗೂ ಎಂ. ಶಿವಮೂರ್ತಿ ಎಸ್. ಬಸವನಗೌಡ, ವೆಂಕಟೇಶ್ ನಾಯ್ಕ್. ಸಂಪನ್ಮೂಲ ವ್ಯಕ್ತಿಗಳಾಗಿ ರಾಮಣ್ಣ ಸಾವಯವ ಕೃಷಿಕರು ದುಪದಹಳ್ಳಿ ಮತ್ತು ಸಿರಿ ಮಿಲೇಟ್ ಮೇಲ್ವಿಚಾರಕರಾದ ಶಂಕರಗೌಡ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸಾವಿತ್ರಿ ಸೇವಾಪ್ರತಿನಿಧಿ ಶ್ರುತಿ,ವಿಎಲ್ಎ ಮಂಜುನಾಥ ಹಾಗೂ ಕೇಂದ್ರದ ಸರ್ವ ಸದಸ್ಯರು ಹಾಜರಿದ್ದರು.

---

## ಪಾಠ ಮಾಡ ಬನ್ನಿ ವಿದ್ಯಾರ್ಥಿಗಳಿಂದ ಪ್ರತಿಭಟನೆ




**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ:**

ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್ಎಫ್ಐ) ತಾಲೂಕು ಘಟಕ ಪದಾಧಿಕಾರಿಗಳು ಇಲ್ಲಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ನ ವಿದ್ಯಾರ್ಥಿಗಳನ್ನೊಳಗೊಂಡು ಉಪನ್ಯಾಸಕರಿಗಾಗಿ ಶನಿವಾರ ರಸ್ತೆಗಿಳಿದು ಪ್ರತಿಭಟಿಸಿ, ತಹಸೀಲ್ದಾರ್ ಮೂಲಕ ಸಿಎಂಗೆ ಮನವಿಮಾಡಿದರು.

ಎಸ್ಎಫ್ಐ ತಾಲೂಕು ಅಧ್ಯಕ್ಷ ಜಯಸೂರ್ಯ ಮಾತನಾಡಿ, ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ರಸ್ತೆಗಿಳಿದು ಹೋರಾಟ ಮಾಡುವುದು ಅನಿವಾರ್ಯವಾಗಿದೆ. ಕಳೆದೆರಡು ತಿಂಗಳಿನಿಂದ ಅತಿಥಿ ಉಪನ್ಯಾಸಕರ ಮುಷ್ಕರದಿಂದ ತರಗತಿಗಳು ಸರಿಯಾಗಿ ನಡೆಯದೆ, ಬೋಧನೆಯಲ್ಲಿ ಹಿನ್ನೆಡೆಯಾಗಿ ಶಿಕ್ಷಣ ಕುಂಟಿತವಾಗುತ್ತಿದೆ. ವಿದ್ಯಾರ್ಥಿಗಳ ಕಲಿಕೆಯ ಮೇಲೆ ದುಷ್ಪರಿಣಾಮ ಬೀರಿದ್ದು, ಭವಿಷ್ಯದಲ್ಲಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ನಷ್ಟವುಂಟಾಗಲಿದೆ. ಕರೋನಾ ನಂತರ ಈ ವರ್ಷ ಎರಡು ತಿಂಗಳುಗಳ ಕಾಲ ಪರಿಪೂರ್ಣ ತರಗತಿಗಳು ನಡೆಯುತ್ತಿಲ್ಲ ಎಂದು ಆರೋಪಿಸಿದರು. ಉಪನ್ಯಾಸಕರ ಕೊರತೆ ನೀಗಿಸಿ, ಪಠ್ಯ ಭೋಧನೆ ನಡೆಯುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಶಿರಸ್ತೆದಾರರಿಗೆ ಮನವಿಪತ್ರ ಸಲ್ಲಿಸಿದರು. ಈ ವೇಳೆ ವಿದ್ಯಾರ್ಥಿಗಳಾದ ಮೈಲಾರಿ, ಜಗದೀಶ, ಶಿವರಾಮ್, ವಿನಯ್, ಮಾರುತಿ, ವೀರೇಂದ್ರ, ಬಸವರಾಜ್, ಚೈತ್ರಾ, ಅಕ್ಷತಾ, ತುಳಸಿ, ಅನಿತಾ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

---

## ಈ.ಕ. ಪದವೀಧರ ಕ್ಷೇತ್ರದ ಮತದಾರರ ಪಟ್ಟಿ ಪ್ರಕಟ

**ಹಂಪಿ ಟೈಮ್ಸ್ ಹೊಸಪೇಟೆ**

ಈಶಾನ್ಯ ಕರ್ನಾಟಕ ಪದವೀಧರ ಮತದಾರರ ಪಟ್ಟಿ ಪರಿಷ್ಕರಿಸಿ, ಅಂತಿಮ ಮತದಾರರ ಪಟ್ಟಿಪ್ರಕಟಿಸಲಾಗಿದೆ ಎಂದು ವಿಜಯನಗರ ಜಿಲ್ಲಾಧಿಕಾರಿ ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.



ಈಶಾನ್ಯ ಕರ್ನಾಟಕ ಪದವೀಧರ ಕ್ಷೇತ್ರದ ಮತದಾರರ ಪಟ್ಟಿ ಪರಿಷ್ಕರಣೆಗೆ ಅಕ್ಟೋಬರ್ 1ರಿಂದ ನವಂಬರ್ 6ರ ವರೆಗೆ ಅರ್ಜಿ ಸ್ವೀಕರಿಸಿ, ಡಿಸೆಂಬರ್ 23ರ ವರೆಗಿನ ಆಕ್ಷೇಪಣೆ ಅವಧಿಯಲ್ಲಿ ಸ್ವೀಕೃತವಾದ ಅರ್ಹ ಮತದಾರರನೋಂದಣೆ ನಂತರ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ.

**ಅಂತಿಮ ಮತದಾರ ಪಟ್ಟಿ ವಿವರ:**

ಹಡಗಲಿ, ಹಗರಿಬೊಮ್ಮನಹಳ್ಳಿ, ಕೊಟ್ಟೂರು, ವಿಜಯನಗರ, ಕೂಡ್ಲಿಗಿ ಹಾಗೂ ಹರಪನಹಳ್ಳಿ ತಾಲ್ಲೂಕು ಒಳಗೊಂಡಂತೆ 11,079 ಪುರುಷ, 5918 ಮಹಿಳಾ ಮತ್ತು 2 ಇತರೆ ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 16,999 ಪದವೀಧರ ಮತದಾರರಿದ್ದಾರೆ. ಅಂತಿಮ ಮತದಾರ ಪಟ್ಟಿಯನ್ನು ಜಿಲ್ಲಾಧಿಕಾರಿ ಕಚೇರಿ, ಸಹಾಯಕ ಆಯುಕ್ತರ ಕಚೇರಿ, ಜಿಲ್ಲೆಯ ಎಲ್ಲಾ ತಾಲ್ಲೂಕು ಕಚೇರಿ, ನಗರಸಭೆ, ಪಟ್ಟಣ ಪಂಚಾಯಿತಿ ಮತ್ತು ಪುರಸಭೆ ಕಚೇರಿಗಳಲ್ಲಿ ಪ್ರಕಟಿಸಿದ್ದು, ವಿಜಯನಗರ ಜಿಲ್ಲಾ ವೆಬ್‌ಸೈಟ್‌ಹಾಗೂ ಚುನಾವಣಾ ಆಯೋಗದ ವೆಬ್‌ಸೈಟ್ ನಲ್ಲಿ ಸಹ ಪರಿಶೀಲನೆ ಮಾಡಿಕೊಳ್ಳಬಹುದಾಗಿದೆ.

ನಿರಂತರ ಮತದಾರ ನೋಂದಣೆ ಪ್ರಕ್ರಿಯ ಚಾಲನೆಯಲ್ಲಿದ್ದು, ಅರ್ಹ ಮತದಾರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ನೋಂದಣೆ ಮಾಡಲು ನಮೂನೆ–18 ನ್ನು ಸಲ್ಲಿಸಲು ಅವಕಾಶ ಇರುತ್ತದೆ.

---

## ಕೋವಿಡ್ ಭಯ ಬೇಡ ಮುಂಜಾಗ್ರತೆವಹಿಸಿ




**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಯಾವುದೇ ಹೊಸ ರೂಪಾಂತರಿ ಕೋವಿಡ್ ಪ್ರಕರಣಗಳು ಕಂಡುಬಂದಿಲ್ಲ, ಕೋವಿಡ್ ನಿಯಂತ್ರಿಸುವಲ್ಲಿ ಜಿಲ್ಲಾಡಳಿತ ಸನ್ನದ್ಧವಾಗಿದ್ದು, ಸಾರ್ವಜನಿಕರು ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲವೆಂದು ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಶನಿವಾರದಂದು, ನಗರದ ವಿಮ್ಸ್ ಆಸ್ಪತ್ರೆಯ ಆಡಳಿತ ಭವನದ ಸಭಾಂಗಣದಲ್ಲಿ ಕೋವಿಡ್ (ಜೆಎನ್–1) ತಡೆಗಟ್ಟುವಿಕೆ ಕುರಿತು ಹಮ್ಮಿಕೊಂಡಿದ್ದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದು ಮಾತನಾಡಿದ ಅವರು, ಕೋವಿಡ್ ಎದುರಿಸಲು ಜಿಲ್ಲೆಯಲ್ಲಿ ಸಕಲ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು ಮಾತನಾಡಿ, ಈಗಾಗಲೇ ಜಿಲ್ಲೆಯಲ್ಲಿನ ಎಲ್ಲಾ ಆಸ್ಪತ್ರೆಗಳು ಸೇರಿದಂತೆ 275 ವೆಂಟಿಲೇಟರ್‌ಗಳು, 889 ಆಮ್ಲಜನಕ ಸಹಿತ ಹಾಸಿಗೆಗಳು, 356 ಐಸಿಯು ಬೆಡ್‌ಗಳು ಲಭ್ಯವಿದ್ದು, ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಿದರು.

ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಬಸರೆಡ್ಡಿ, ವಿಮ್ಸ್ ನಿರ್ದೇಶಕ ಡಾ.ಗಂಗಾಧರ ಗೌಡ, ವಿಮ್ಸ್ ಆಡಳಿತಾಧಿಕಾರಿ ಸಿದ್ರಾಮೇಶ್ವರ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

---


**ಪಂಚಮಿತ್ರ ಪತ್ತಿನ ಸೌಹಾರ್ದ ಸಹಕಾರಿ ನಿ.,**
**ಹಗರಿಬೊಮ್ಮನಹಳ್ಳಿ, ವಿಜಯನಗರ ಜಿಲ್ಲೆ**

**ಪ್ರಕಟಣೆ**

ಪಂಚಮಿತ್ರ ಪತ್ತಿನ ಸೌಹಾರ್ದ ಸಹಕಾರಿ ನಿ., ಹಗರಿಬೊಮ್ಮನಹಳ್ಳಿ, ಜಿ॥ ವಿಜಯನಗರ. ಸಹಕಾರಿಯ ಆಡಳಿತ ಮಂಡಲಿ ನಿರ್ದೇಶಕರ ಸಾಮಾನ್ಯ ಚುನಾವಣೆ ಜರುಗಿಸಲು ವೇಳಾಪಟ್ಟಿ ಪ್ರಕಟಿಸಲಾಗಿದ್ದು, ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ: 05–12–2023ರ ಮಧ್ಯಾಹ್ನ 3–00 ಗಂಟೆಯವರೆಗೆ, ದಿನಾಂಕ: 06–12–2023ರಂದು ನಾಮಪತ್ರಗಳ ಪರಿಶೀಲನೆ ಹಾಗೂ ದಿನಾಂಕ: 07–12–2023 ರಂದು ಮಧ್ಯಾಹ್ನ 3–00 ಗಂಟೆಯವರೆಗೆ ನಾಮಪತ್ರ ವಾಪಾಸು ಪಡೆಯಲು ಕೊನೆಯ ದಿನವಾಗಿರುತ್ತದೆ. ಮತದಾನ ಅವಶ್ಯವಾದಲ್ಲಿ ದಿನಾಂಕ: 13–01–2024ರಂದು ಸಹಕಾರಿಯ ಕಛೇರಿಯಲ್ಲಿ ಮತದಾನ ನಡೆಯಲಿದ್ದು, ಸಹಕಾರಿಯ ಸದಸ್ಯರುಗಳಿಗೆ ಚುನಾವಣಾ ವೇಳಾಪಟ್ಟಿಯನ್ನು ಕಳುಹಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಬಹುದಾಗಿದೆಯೆಂದು ಪ್ರಕಟಣೆಯ ಮೂಲಕ ತಿಳಿಸಿದೆ.

ಸಹಿ/–
**(ಮೊ॥ ಖಾಲಿದ್ ಬಾಷ) ರಿಟರ್ನಿಂಗ್ ಅಧಿಕಾರಿ**
ಪಂಚಮಿತ್ರ ಪತ್ತಿನ ಸೌಹಾರ್ದ ಸಹಕಾರಿ ನಿ., ಹಗರಿಬೊಮ್ಮನಹಳ್ಳಿ ಹಾಗೂ ಲೆಕ್ಕ ಪರಿಶೋಧಕರು, ಉಪ ನಿರ್ದೇಶಕರ ಕಛೇರಿ, ಬಳ್ಳಾರಿ.

ದಿನಾಂಕ: 25–12–2023
ಸ್ಥಳ: ಬಳ್ಳಾರಿ



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA





ಮೈಕ್ರೋ ನ್ಯೂಸ್

## ಶ್ರೀರಾಮ ಮಂದಿರ ಉದ್ಘಾಟನೆಗೆ ಜಗದ್ಗುರು ವಚನಾನಂದ ಶ್ರೀಗಳಿಗೆ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ:** ಜನವರಿ 22, 2024 ರಂದು ನಡೆಯಲಿರುವ



ಅಂತಾರಾಷ್ಟ್ರೀಯ ಮಟ್ಟದ ಐತಿಹಾಸಿಕ ಧಾರ್ಮಿಕ ಕಾರ್ಯಕ್ರಮ ಅಯೋಧ್ಯೆಯಲ್ಲಿ ಶ್ರೀರಾಮಲಲ್ಲಾ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಮತ್ತು ಶ್ರೀರಾಮ ಮಂದಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲು ಹರಿಹರ ಹರಕ್ಷೇತ್ರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳವರಿಗೆ ಶ್ರೀರಾಮ ಮಂದಿರ ಪ್ರತಿಷ್ಠಾನ ಟ್ರಸ್ಟ್, ನವರು ಆಹ್ವಾನ ನೀಡಿದ್ದಾರೆ. ಜಗದ್ಗುರುಗಳು ಈ ಐತಿಹಾಸಿಕ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆಂದು ಶ್ರೀ ಪೀಠದ ಆಡಳಿತಾಧಿಕಾರಿ ಡಾ.ರಾಜ್ ಕುಮಾರ್ ತಿಳಿಸಿದ್ದಾರೆ.

**ಇಂದೇ ಹಂಪಿ ಟೈಮ್ಸ್ ವಾಟ್ಸಪ್ ಚಾನಲ್ ಫಾಲೋ ಮಾಡಿ, ಇ-ಪೇಪರ್ ಉಚಿತವಾಗಿ ಪಡೆಯಿರಿ**

# ಅರಿವು ಕೊಟ್ಟ ಶಾಲೆಯನ್ನ ಮರೆಯದಿರಿ

**ಸಹಕಾರ ಇಲಾಖೆಯ ನಿವೃತ್ತ ಅಪರ ನಿಬಂಧಕರಾದ ಹೆಚ್.ಎಂ. ವೀರಭದ್ರಸ್ವಾಮಿ ಹೇಳಿಕೆ | ನಿಂಬಳಗೆರೆ ಸರ್ಕಾರಿ ಶಾಲೆಯ ಶಿಕ್ಷಣ ಸ್ಮರಿಸಿದ ಹಳೆ ವಿದ್ಯಾರ್ಥಿಗಳು**

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ನಿಂಬಳಗೆರೆ ಗ್ರಾಮದ ಶ್ರೀ ಬೊಳಗಟ್ಟಿ ಸಾಹುಕಾರ ಕೊಟ್ರಪ್ಪ ವೀರಮ್ಮ ಸರ್ಕಾರಿ ಪ್ರೌಢಶಾಲೆಗೆ ಈ ವರ್ಷದ ಕನ್ನಡ ರಾಜ್ಯೋತ್ಸವದ ಪ್ರತಿಷ್ಠಿತ ಗೋವಿಂದೇಗೌಡ ಉತ್ತಮ ಶಾಲೆ ಪ್ರಶಸ್ತಿ ಲಭಿಸಿರುವುದು ಹೆಮ್ಮೆಯ ಸಂಗತಿ ಎಂದು ಸಹಕಾರ ಇಲಾಖೆಯ ನಿವೃತ್ತ ಅಪರ ನಿಬಂಧಕರಾದ ಹೆಚ್.ಎಂ. ವೀರಭದ್ರಸ್ವಾಮಿ ಹೇಳಿದರು.

ಇತ್ತೀಚೆಗೆ ಶಾಲೆಗೆ ಭೇಟಿ ನೀಡಿ ಮುಖ್ಯಗುರುಗಳು ಮತ್ತು ಶಿಕ್ಷಕರನ್ನು ಸನ್ಮಾನಿಸಿ ಮಾತನಾಡಿದರು. ರಾಜ್ಯಮಟ್ಟದ ಪ್ರಶಸ್ತಿಗಳು ಹಳ್ಳಿಗಳನ್ನು ಹುಡುಕಿಕೊಂಡು ಬಂದಿರುವುದರ ಹಿಂದೆ ಶಾಲೆಯ ಮುಖ್ಯಗುರು, ಸಮಸ್ತ ಶಿಕ್ಷಕರು ಹಾಗೂ ಸಿಬ್ಬಂದಿಗಳ ಅಪಾರ ಪರಿಶ್ರಮವಿದೆ. ಈ ಶಾಲೆಯಲ್ಲಿ ಮಕ್ಕಳಿಗೆ ಮನದಟ್ಟಾಗುವ ರೀತಿಯಲ್ಲಿ ವಿವಿಧ ಚಟುವಟಿಕೆಗಳ ಮೂಲಕ ಶಿಕ್ಷಣ ನೀಡುತ್ತಿದ್ದಾರೆ. ಇಲ್ಲಿ ಓದಿದ ಮಕ್ಕಳು ಖಾಸಗಿ ಹಾಗೂ ಸರ್ಕಾರಿ ಉನ್ನತ ಹುದ್ದೆಗಳಲ್ಲಿ ಪಡೆದಿದ್ದಾರೆ. ಗ್ರಾಮೀಣ



ಸಹಕಾರ ಇಲಾಖೆಯ ನಿವೃತ್ತ ಅಪರ ನಿಬಂಧಕರಾದ ಹೆಚ್.ಎಂ. ವೀರಭದ್ರಸ್ವಾಮಿ ಇವರು ತಮ್ಮ ಸಹೋದರರ ನೆನಪಿಗಾಗಿ ನಿಂಬಳಗೆರೆ ಸರ್ಕಾರಿ ಶಾಲಾ ಮಕ್ಕಳಿಗೆ ಅವಶ್ಯವಿರುವ ಪುಸ್ತಕಗಳನ್ನು ನೀಡಿದರು. ಸ್ನೇಹಿತರು, ಶಿಕ್ಷಕರು ಇದ್ದರು.

ಶಾಲೆಯಲ್ಲಿ ಓದಿ ಉನ್ನತ ಹುದ್ದೆಯಲ್ಲಿರುವವರು ಸರ್ಕಾರಿ ಶಾಲೆಗಳ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಕೈಜೋಡಿಸುವ ಮೂಲಕ ಶಾಲೆಯ ಮಕ್ಕಳಿಗೆ ಮತ್ತಷ್ಟು ಗುಣಾತ್ಮಕ ಶಿಕ್ಷಣ ದೊರಕಿಸಿಕೊಡಲು ಮುಂದಾಗಬೇಕು ಎಂದರು. ಮಕ್ಕಳ ಜೊತೆಗೆ ತಮ್ಮ ಶಾಲೆಯ ದಿನಗಳ ಅನುಭವಗಳನ್ನು ಹಂಚಿಕೊಂಡರು. ಶಿಕ್ಷಕರ ಶಿಸ್ತು ಮತ್ತು ಆಸಕ್ತಿಯನ್ನು ಮನಃಪೂರ್ವಕವಾಗಿ ಶ್ಲಾಘಿಸಿದರು.

ಇದೇ ಸಂದರ್ಭದಲ್ಲಿ ಇವರ ತಂದೆ ಎಂ.ನಿಜಲಿಂಗಯ್ಯನವರು ಇದೇ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದನ್ನು ಸ್ಮರಿಸಿ, ಹಿರಿಯ ಸಹೋದರರಾದ ನಿವೃತ್ತ ಪ್ರಾಧ್ಯಾಪಕ ಹೆಚ್.ಎಂ.ಚಂದ್ರಶೇಖರಯ್ಯ ಮತ್ತು ಹೆಚ್.ಎಂ.ಶಿವಮೂರ್ತಿ ಇವರ ನೆನಪಿಗಾಗಿ ಶಾಲಾ ಮಕ್ಕಳಿಗೆ ಅವಶ್ಯವಿರುವ ಪುಸ್ತಕಗಳನ್ನು ನೀಡಿ, ಪ್ರೌಢಶಾಲೆಯ ಮುಖ್ಯಗುರು ಜಿ.ಪಕ್ಕೀರಪ್ಪ ಮತ್ತು ಶಿಕ್ಷಕರನ್ನು ಹಾಗೂ ಶಾಲೆಗೆ ಭೂದಾನ ಮಾಡಿದ ಬಿ. ಎಸ್.ಕೊಟ್ರೇಶ, ನಿವೃತ್ತ ಪ್ರಾಧ್ಯಾಪಕ ಮಹಾಂತೇಶ ಮತ್ತು ಶಾಲಾ ವ್ಯವಸ್ಥಾಪನ ಸಮಿತಿಯ ಸದಸ್ಯರಾದ ಎಂ..ಜಿ.ಪ್ರಕಾಶ್ ಗೌಡ ಇವರನ್ನು ತುಂಬು ಹೃದಯದಿಂದ ಸನ್ಮಾನಿಸಿದರು. ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಇತರರು ಉಪಸ್ಥಿತರಿದ್ದರು.

## ಪ್ರಾಧಿಕಾರದ ಪ್ರಕಟಣೆಗಳಿಗೆ ಶೇ.50 ರಷ್ಟು ರಿಯಾಯಿತಿ

**ಹಂಪಿ ಟೈಮ್ಸ್ ಬಳ್ಳಾರಿ**

ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ 2024ರ ಜನವರಿ ತಿಂಗಳು ಪೂರ್ತಿ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲಾ ಪುಸ್ತಕಗಳನ್ನು ಶೇ.50ರ ರಿಯಾಯಿತಿ ದರಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಪುಸ್ತಕ ಪ್ರಿಯರು ಇದರ ಸದುಪಯೋಗ ಪಡೆಯಬೇಕೆಂದು ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ ಸಿಂಗ್ ಅವರು ತಿಳಿಸಿದ್ದಾರೆ.

ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆಯಲ್ಲಿ (ಸಂಪರ್ಕ ಸಂಖ್ಯೆ 080-22107705) ಹಾಗೂ ಎಲ್ಲಾ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದಿಂದ ತೆರೆಯಲಾದ ಎಲ್ಲಾ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಈ ರಿಯಾಯಿತಿ ಸೌಲಭ್ಯ ದೊರೆಯಲಿದೆ. ಅಲ್ಲದೇ ಕನ್ನಡ ಪುಸ್ತಕ ಪ್ರಾಧಿಕಾರದ www.kannadapustakapradhikara.com (ನಮ್ಮ ಪ್ರಕಟಣೆಗಳು ವಿಭಾಗ) ನಲ್ಲಿಕೂಡ ಈ ಶೇ.50ರಷ್ಟು ರಿಯಾಯಿತಿ ಲಭ್ಯವಿದೆ ಎಂದು ಅವರು ತಿಳಿಸಿದ್ದಾರೆ.

## ವಿಜಯನಗರ ಜಿಲ್ಲೆಯಲ್ಲಿ 22 ಕೋವಿಡ್ ಪಾಸಿಟಿವ್

**ಹಂಪಿ ಟೈಮ್ಸ್ ಹೊಸಪೇಟೆ:** ವಿಜಯನಗರ ಜಿಲ್ಲೆಯಲ್ಲಿ ಶನಿವಾರ 6 ಕೋವಿಡ್ ಪಾಸಿಟಿವ್ ಪತ್ತೆಯಾಗಿದ್ದು, ಒಟ್ಟು 22 ವ್ಯಕ್ತಿಗಳಲ್ಲಿ ಕೋವಿಡ್ ಕಾಣಿಸಿಕೊಂಡಿದೆ. ರಾಜ್ಯಾದ್ಯಾಂತ ಒಂದೇ ದಿನ 201 ಪ್ರಕರಣಗಳ ಪತ್ತೆಯಾಗಿದ್ದು, ಒಟ್ಟು 833 ಕೋವಿಡ್ ಪಾಸಿಟಿವ್ ಇರುವವರು ಇದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.